(8)

(89)

ಪ್ರತಿ ವರ್ಷ ಪಶ್ಚಿಮ ಘಟ್ಟದಲ್ಲಿ ಭೂ ಕುಸಿತಕ್ಕೆ ಅನೇಕ ಜನ ಜಾನುವಾರುಗಳು ಬಲಿಯಾಗುತ್ತಿದ್ದು, ಕೊಡಗು, ಚಿಕ್ಕಮಗಳೂರು, ಉತ್ತರ ಕನ್ನಡ, ಮಂಗಳೂರು ಮತ್ತು ಉಡುಪಿ ಸೇರಿದಂತೆ ಮಲೆನಾಡು ಜಿಲ್ಲೆಗಳಲ್ಲಿ ಭೂ ಕುಸಿತವಾಗುತ್ತಿದ್ದು, ಈ ರೀತಿ ಭೂ ಕುಸಿತಕ್ಕೆ ಕಾರಣಗಳೇನು ಎಂಬ ಕುರಿತು ವೈಜ್ಞಾನಿಕವಾಗಿ ಅಧ್ಯಯನ ನಡೆಸಿ, ಪಶ್ಚಿಮ ಘಟ್ಟಗಳ ಸಂರಕ್ಷಣೆಗೆ ಕ್ರಮ ವಹಿಸುವುದು. ಕಾವೇರಿ, ಹೇಮಾವತಿ, ಶರಾವತಿ ನದಿಗಳು ತುಂಬಿ ಹರಿಯುತ್ತಿವೆ ಎಂದು ಒಂದೆಡೆ ನಾವು ಖುಷಿ ಪಡುತ್ತಿದ್ದರೆ. ಇನ್ನೊಂದೆಡೆ ಜನರು ಬದುಕು ಕೊಚ್ಚಿ ಮುಳುಗಿ ಹೋಗಿ ಮೂರಾಬಟ್ಟೆಯಾಗಿರುತ್ತದೆ. ಆದ್ದರಿಂದ ಪಶ್ಚಿಮಘಟ್ಟ ಪ್ರದೇಶ, ಮಲೆನಾಡು ಮತ್ತು ಕರಾವಳಿ ಪ್ರದೇಶಗಳ ರಸ್ತೆ ಅಭಿವೃದ್ಧಿ / ನಿರ್ವಹಣೆ ಮತ್ತು ಬೆಳೆ ಹಾನಿಗೆ ವಿಶೇಷ ಪ್ಯಾಕೇಜ್ ನಿಗದಿ ಮಾಡುವ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯಲು ನಿಯಮ – 72 ರಡಿ ಮಂಡಿಸಿರುವ ಸೂಚನೆಗೆ ಉತ್ತರ:

1) ರಾಜ್ಯದಲ್ಲಿ ಮುಂಗಾರಿನ ಮುಂಗಾರಿನ ಅವಧಿಯಲ್ಲಿ ಜೂನ್ 01 ರಿಂದ 22/07/2024ರ ವರೆವಿಗೂ ರಾಜ್ಯದಲ್ಲಿ 392 ಮಿ.ಮೀ. ಮಳೆಯಾಗಬೇಕಾಗಿದ್ದು, 488 ಮಿ.ಮೀ ಮಳೆಯಾಗಿದ್ದು ಶೇ. 25ರಷ್ಟು ಹೆಚ್ಚು ಮಳೆಯಾಗಿರುತ್ತದೆ.

2) ರಾಜ್ಯದ 3 ಕರಾವಳಿ ಜಿಲ್ಲೆಗಳಾದ ಉಡುಪಿ, ಉತ್ತರಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ದಿನಾಂಕ: ಜುಲೈ 01 ರಿಂದ 22/07/2024ರ ವರೆವಿಗೂ 1652 ಮಿ.ಮೀ ವಾಸ್ತವವಾಗಿ ಮಳೆಯಾಗಬೇಕಾಗಿದ್ದು, 2029 ಮಿ.ಮೀ ಶೇ. 23 ರಷ್ಟು ಹೆಚ್ಚು ಮಳೆಯಾಗಿರುತ್ತದೆ. ಮಲೆನಾಡು ಪ್ರದೇಶಗಳಲ್ಲಿ 789 ಮಿ.ಮೀ ಮಳೆಯಾಗಬೇಕಾಗಿದ್ದು, 899 ಮಿ.ಮೀ ಶೇ. 14 ರಷ್ಟು ಹೆಚ್ಚು ಮಳೆಯಾಗಿರುತ್ತದೆ.



Scanned with OKEN Scanner

3) ಭಾರತ ಸರ್ಕಾರದ ಭೂ ವೈಜ್ಞಾನಿಕ ಸರ್ವೇಕ್ಷಣಾ ಸಂಸ್ಥೆ ಹಾಗೂ ರಾಜ್ಯ ಸರ್ಕಾರದ ಸ್ವಾಯತ್ತ ಸಂಸ್ಥೆಯಾದ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರವು ನಡೆಸಿದ ವಿವರವಾದ ಅಧ್ಯಯನದ ಪ್ರಕಾರ, ಕರ್ನಾಟಕದ ಪಶ್ಚಿಮ ಘಟ್ಟಗಳಲ್ಲಿ ಭೂ ಕುಸಿತಗಳಿಗೆ ಈ ಕೆಳಕಂಡ ಅಂಶಗಳು ಪ್ರಮುಖ ಕಾರಣಗಳೆಂದು ತಿಳಿದು ಬಂದಿರುತ್ತದೆ.

1. ಹೆಚ್ಚಿನ ತೀವ್ರತೆ ಮತ್ತು ದೀರ್ಘಕಾಲದ ಮಳೆ.
2. ನೈಸರ್ಗಿಕ ಇಳಿಜಾರುಗಳ ಮಾರ್ಪಾಡು.
3. ನೈಸರ್ಗಿಕ ನದಿಗಳ ತಡೆ.
4. ಇಳಿಜಾರಿನ ಒಳಗಿನಿಂದ ಮಳೆ ನೀರು ಬಲಪ್ರಯೋಗದಿಂದ ಹರಿಯುವುದು.
5. ಕಾಫಿ ಎಸ್ಟೇಟ್‌ಗಳಲ್ಲಿನ ಮಾನವ ನಿರ್ಮಿತ ನೀರಿನ ಟ್ಯಾಂಕ್/ ಕೊಳಗಳು.
6. ನಾಲಾದಲ್ಲಿ ತಾತ್ಕಾಲಿಕ ಅಣೆಕಟ್ಟು ರಚನೆಯಿಂದಾಗಿ ಹಠಾತ್ ಪ್ರವಾಹ.
7. ಭೌಗೋಳಿಕ ಕಾರಣಗಳು (ಬೌಗೋಳಿಕ ರೇಖೆಗಳು/ರಚನೆಗಳು)
8. ಎನ್.ಹೆಚ್.ಎ.ಐ. ಹಾಗೂ ಇತರೆ ಸಂಸ್ಥೆಗಳ ಅವೈಜ್ಞಾನಿಕ ರಸ್ತೆ ಕಾಮಗಾರಿಗಳು.

4) ಈ ಕೆಳಕಂಡ ಉಪಶಮನ ಕ್ರಮಗಳಿಂದ ಭೂಕುಸಿತಗಳನ್ನು ತಗ್ಗಿಸಲು ಪರಿಣಾಮಕಾರಿಯಾಗುತ್ತದೆ.

1. ಉತ್ಖನನ (**EXCAVATION**)
2. ಇಳಿಜಾರುಗಳನ್ನು ಬಲಪಡಿಸುವುದು.
3. ಒಳಚರಂಡಿ ತಂತ್ರಗಳನ್ನು ಅಳವಡಿಸುವುದು.
4. ಸಸ್ಯವರ್ಗವನ್ನು ಬಳಿಸಿಕೊಂಡು ಇಳಿಜಾರು ಸ್ಥಿರೀಕರಣ.



Scanned with OKEN Scanner

5. ರಾಕ್ ಸ್ಲೋಪ್ ಸ್ಟೆಬಿಲೈಸೇಶನ್ ಟೆಕ್ನಿಕ್.

6. ದುರ್ಬಲ ಸ್ಥಳಗಳಲ್ಲಿ ಭೂ ಕುಸಿತದ ಚಿಹ್ನೆಗಳನ್ನು ಅಳವಡಿಸುವುದು.

5) ರಾಜ್ಯದ ಪಶ್ಚಿಮ ಘಟ್ಟಗಳ ವ್ಯಾಪ್ತಿಗೆ ಒಳಪಡುವ ಒಟ್ಟು 7 ಜಿಲ್ಲೆಗಳಾದ ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಕೊಡಗು, ಶಿವಮೊಗ್ಗ ಮತ್ತು ಹಾಸನಗಳಲ್ಲಿ ಭೂಕುಸಿತ ಸಂಭವಿಸಬಹುದಾದ 250 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಒಟ್ಟು 1351 ಗ್ರಾಮಗಳನ್ನು ಗುರುತಿಸಲಾಗಿದ್ದು. ಈ ಪ್ರದೇಶಗಳಲ್ಲಿ ಭೂ ಕುಸಿತಗಳನ್ನು ತಡೆಗಟ್ಟಲು ಭಾರತ ಸರ್ಕಾರದ ಭೂ ವೈಜ್ಞಾನಿಕ ಸರ್ವೇಕ್ಷಣಾ ಸಂಸ್ಥೆ **(Geological Survey of India)** ಹಾಗೂ **National Insitute of Rock Machanics (NIRM)** ಸಹಯೋಗದೊಂದಿಗೆ ಉಪಶಮನ ಕ್ರಮಗಳನ್ನು ಕೈಗೊಳ್ಳುವುದು ಭೂಕುಸಿತಗಳನ್ನು ತಡೆಯಲು ಕರಾವಳಿ ಮತ್ತು ಮಳೆನಾಡಿನ 7 ಜಿಲ್ಲೆಗಳಾದ ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಕೊಡಗು, ಶಿವಮೊಗ್ಗ ಮತ್ತು ಹಾಸನಗಳಲ್ಲಿ ರೂ. 100 ಕೋಟಿಗಳಲ್ಲಿ ಉಪಶಮನ ಕ್ರಮಗಳನ್ನು ಕೈಗೊಳ್ಳಲಾಗುವುದು.

6) **NHAI** ಅಧಿಕಾರಿಗಳೊಂದಿಗೆ ಸಭೆಗಳನ್ನು ನಡೆಸಲಾಗಿದ್ದು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಮುಖ್ಯವಾಗಿ ಎನ್.ಹೆಚ್-66 ಹಾಗೂ ಮಲೆನಾಡಿನ ಭಾಗಗಳಲ್ಲಿ ಅವೈಜ್ಞಾನಿಕ ಕಾಮಗಾರಿಗಳನ್ನು ಕೂಡಲೇ ಪರಿಣಾತ್ಮಕ ಕ್ರಮಗಳು ಕೈಗೊಳ್ಳಲಾಗುವುದು.

7) ವಿಪತ್ತು ನಿರ್ವಹಣೆ ಕಾರ್ಯಪಡೆಗಳನ್ನು ರಚಿಸಲಾಗಿದ್ದು ಭೂಕುಸಿತವಾಗುವಂತಹ ಅಪಾಯಕಾರಿ ಸ್ಥಳಗಳನ್ನು ಗುರುತಿಸಿ ಸದರಿ ಸ್ಥಳಗಳಲ್ಲಿನ ಮನೆಗಳನ್ನು ಸ್ಥಳಾಂತರಿಸುವುದು ಹಾಗೂ ಅಪಾಯಕಾರಿ ರಸ್ತೆಗಳಲ್ಲಿನ ಓಡಾಟವನ್ನು ನಿಲ್ಲಿಸಲು ಕ್ರಮವಹಿಸಲಾಗುತ್ತದೆ.

Scanned with OKEN Scanner

8) ನೈಸರ್ಗಿಕ ವಿಕೋಪಗಳಿಂದ ಉಂಟಾದ ಹಾನಿಗೆ ನೀಡಬಹುದಾದ ಪರಿಹರದ ಬಗ್ಗೆ ಭಾರತ ಸರ್ಕಾರದ ಗೃಹ ಮಂತಾಲಯವು ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ/ ರಾಜ್ಯ ವಿಪತ್ತು ಪರಿಹಾರ ನಿಧಿಯ **Revised Items and Norms of Assistance** ಮಾರ್ಗಸೂಚಿಗಳನ್ನು ದಿನಾಂಕ: 11.07.2020 ರಂದು ಹೊರಡಿಸಿರುತ್ತದೆ. ಹಾಗಾಗಿ, ನೈಸರ್ಗಿಕ ವಿಕೋಪಗಳಿಂದ ಉಂಟಾದ ಹಾನಿಗೆ ಭಾರತ ಸರ್ಕಾರವು ನಿಗಧಿಪಡಿಸಿರುವ ದರಗಳಲ್ಲಿ ಮಾತ್ರ ಪರಿಹಾರವನ್ನು ರಾಜ್ಯ ವಿಪತ್ತು ಪರಿಹಾರ ನಿಧಿಯಡಿ ನೀಡಲು ಅವಕಾಶವಿರುತ್ತದೆ. ಅದರಂತೆ, ಪ್ರಕೃತಿ ವಿಕೋಪಗಳಿಂದ ಉಂಟಾದ ಹಾನಿಗೆ ಪರಿಹಾರ ಮೊತ್ತವನ್ನು ನಿಯಮಾನುಸಾರ ಅರ್ಹ ಫಲಾನುಭವಿಗಳ ಆಧಾರ್ ಜೋಡಣೆಯಾಗಿರುವ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಯಲ್ಲಿ ಲಭ್ಯವಿರುವ ಅನುದಾನದಿಂದ ಜಿಲ್ಲಾಧಿಕಾರಿಗಳ ಹಂತದಲ್ಲಿ ಪಾವತಿಸಲಾಗುತ್ತದೆ.

9) ಭಾರತ ಸರ್ಕಾರವು ಗೃಹ ಮಂತ್ರಾಲಯವು ದಿನಾಂಕ: 11.07.2023 ರಂದು ಹೊರಡಿಸಿರುವ ಮಾರ್ಗಸೂಚಿಗಳಲ್ಲಿ ಪ್ರಕೃತಿ ವಿಕೋಪದಿಂದ ಮರಣ ಹೊಂದಿದ ವ್ಯಕ್ತಿಗಳ ಕುಟುಂಬದ ವಾರಸುದಾರರಿಗೆ **EX-GRATIA** ಮೊತ್ತವನ್ನು ನೀಡಲು ಹಾನಿಗೊಳಗಾದ ಮನೆಗಳಿಗೆ ಪರಿಹಾರ ಮೊತ್ತವನ್ನು ನೀಡಲು, ದುರಸ್ತಿ ಗೊಂಡಿರುವ ರಸ್ತೆ ಮತ್ತು ಸೇತುವೆಗಳನ್ನು ತುರ್ತಾಗಿ ರಿಪೇರಿಗೊಳಿಸಲು, ಅಡಚಣೆಗೊಂಡಿರುವ ವಿದ್ಯುತ್ ಸಂಪರ್ಕಗಳನ್ನು ತುರ್ತಾಗಿ ಪುನರ್ ಸ್ಥಾಪಿಸಲು ಹಾಗೂ ಶಾಲೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳ ಹಾಗೂ ಇತರೆ ಸರ್ಕಾರಿ ಕಟ್ಟಡಗಳನ್ನು ದುರಸ್ಥಿಗೊಳಿಸಲು ಅಗತ್ಯ ಕ್ರಮಗಳನ್ನು ತುರ್ತಾಗಿ ಕೈಗೊಳ್ಳಲು ಅನುದಾನವನ್ನು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಭರಿಸಲು ಅವಕಾಶ ಕಲ್ಪಿಸಿರುತ್ತದೆ. ಅದರಂತೆ ಅಗತ್ಯತೆಗನುಗುಣವಾಗಿ ಜಿಲ್ಲಾಧಿಕಾರಿಗಳ ಹಂತದಲ್ಲಿ ನಿಯಮಾನುಸಾರ ಸಾರ್ವಜನಿಕರ ಅನುಕೂಲಕ್ಕಾಗಿ ತುರ್ತು ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.



Scanned with OKEN Scanner

10) ಪ್ರಸ್ತುತ 07 ಜಿಲ್ಲೆಗಳಲ್ಲಿ ಕೃಷಿ ಬೆಳೆ ಒಟ್ಟು 601.94 ಹೆಕ್ಟೇರ್ ಮತ್ತು ತೋಟಗಾರಿಕಾ ಬೆಳೆ ಒಟ್ಟು 104.534 ಹೆಕ್ಟೇರ್ ಬೆಳೆಹಾನಿಯಾಗಿರುವುದು ವರದಿಯಾಗಿರುತ್ತದೆ. ಬೆಳೆಹಾನಿ ಪ್ರಕರಣಗಳಲ್ಲಿಯೂ ಸಹ ಭಾರತ ಸರ್ಕಾರದ ಗೃಹ ಮಂತ್ರಾಲಯವು ನಿಗಧಿಪಡಿಸಿರುವ ಮೊತ್ತವನ್ನು ನಿಯಮಾನುಸಾರ ಅರ್ಹ ಫಲಾನುಭವಿಗಳಿಗೆ ಆಧಾರ್ ಜೋಡಣೆಯಾಗಿರುವ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಡಿಬಿಟಿ ಮುಖಾಂತರ ಪಾವತಿಸಲು ಕ್ರಮ ವಹಿಸಲಾಗುತ್ತಿದೆ.

11) ಪ್ರಸ್ತುತ ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಯಲ್ಲಿ ರೂ. 649,75 ಕೋಟಿ ಹಾಗೂ ತಹಶೀಲ್ದಾರುಗಳ ಪಿ.ಡಿ. ಖಾತೆಯಲ್ಲಿ ರೂ. 127.79 ಕೋಟಿ. ಒಟ್ಟಾರೆಯಾಗಿ ರೂ.777.54 ಕೋಟಿ ಅನುದಾನ ಲಭ್ಯವಿರುತ್ತದೆ. ಹಾಗಾಗಿ, ತುರ್ತು ಸಂದರ್ಭಗಳಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾಡಳಿತವು ಸನ್ನದ್ಧವಾಗಿರುತ್ತದೆ.

ಸಂಖ್ಯೆ: ಕಂಇ 341 ಟಿಎನ್ಆರ್ 2024

(ಸಿದ್ದರಾಮಯ್ಯ)
ಮುಖ್ಯಮಂತ್ರಿ

Scanned with OKEN Scanner